ರೆಸ್ಟೋರೆಂಟ್ ಬಗ್ಗೆ ಹೇಳಿದಿರಿ. ಅಲ್ಲಿ ಈಗ ಒಂದು ರೆಸ್ಟೋರೆಂಟ್ ಇದೆ. ಅದನ್ನು ಕೆಎಸ್‌ಟಿಡಿಸಿ ಮೂಲಕ ನಡೆಸುತ್ತಿದ್ದಾರೆ. ಅದಕ್ಕೆ 25-26 ಲಕ್ಷ ರೂಪಾಯಿ ಒಂದು ವರ್ಷಕ್ಕೆ ಖರ್ಚಾಗುತ್ತಿದ್ದು 5-6 ಲಕ್ಷ ರೂಪಾಯಿ ಕೆಎಸ್‌ಟಿಡಿಸಿ ಗೆ ಲಾಭ ಬರುತ್ತಿದೆ. ತಾವು ಮೊಬೈಲ್ ರೆಸ್ಟೋರೆಂಟ್ ಅಂದರೆ ಹೇಗೆ? ಅಲ್ಲಿ ಇನ್ನೊಂದು ರೊಟೇಷನ್ ರೆಸ್ಟೋರೆಂಟ್ ಇದೆ. ಜನ ಹೋಗತಕ್ಕದ್ದು ನಂದಿಬೆಟ್ಟಕ್ಕೆ. ಅಲ್ಲಿ ರೆಸ್ಟೋರೆಂಟ್ ಇದೆ. ಅದು 30 ದಿನವೂ ತೆರೆದಿರುತ್ತದೆ. ಆದ್ದರಿಂದ ಅಲ್ಲಿಗೆ ಮೊಬೈಲ್ ರೆಸ್ಟೋರೆಂಟ್‌ನ ಅವಶ್ಯಕತೆ ಇದೆ ಎಂದು ಕಾಣುವುದಿಲ್ಲ. ಏಕೆಂದರೆ ಅಲ್ಲಿರತಕ್ಕ ರೆಸ್ಟೋರೆಂಟ್ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದನ್ನು ಇನ್ನೂ ಹೆಚ್ಚಾಗಿ ಕೆಲಸ ಮಾಡುವಂತೆ ಮಾಡೋಣ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ರಾಜಣ್ಣನವರ ಅಭಿಪ್ರಾಯ ಈ ರೀತಿ ಇರಬಹುದು. ರಜಾ ದಿನಗಳಲ್ಲಿ ಅಲ್ಲಿ ಹೆಚ್ಚು ಜನರು ಹೋಗುತ್ತಾರೆ. ಆದ್ದರಿಂದ ಅಲ್ಲಿ ಮೊಬೈಲ್ ರೆಸ್ಟೋರೆಂಟ್ ಮೂಲಕ ತಿಂಡಿ, ಕಾಫಿ ವಿತರಣೆ ಮಾಡತಕ್ಕ ವ್ಯವಸ್ಥೆ ಇರಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ನಂದಿಬೆಟ್ಟ ಎಲ್ಲಿದೆ ಎಂದು ನಮಗೆ ನಿಮಗೆ ಎಲ್ಲಾ ಗೊತ್ತಿದೆ. ನಂದಿಬೆಟ್ಟಕ್ಕೆ ಹೋಗುವುದು, ಅಲ್ಲಿಂದ ನಡೆದುಕೊಂಡು ಹೋಗಿ ಒಂದು ಜಾಗಕ್ಕೆ ತಲುಪುವುದು. ಮೊಬೈಲ್ ವ್ಯಾನ್‌ಗಳು ಬಂದರೆ ಜನರಿಗೆ ನಡೆಯಲಿಕ್ಕೆ ತೊಂದರೆಯಾಗಬಹುದು. ಆದ್ದರಿಂದ ರೆಸ್ಟೋರೆಂಟ್ ಇದ್ದ ಜಾಗಕ್ಕೆ ಅವರು ಬಂದರೆ ಒಳ್ಳೆಯದೆಂದು ಕಾಣುತ್ತದೆ. ನಾವು ನೀವು ಒಂದು ಸಾರಿ ಹೋಗಿ ನೋಡಿಕೊಂಡು ಬರೋಣ. I would like to have an inspection along with you.

ಮಡಿಕೇರಿಯಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿರುವ ಸಲಕರಣೆಗಳ ದುರಸ್ತಿ

192 - ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಉಪಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಿಕೇರಿಯಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿರುವ ತಾಂತ್ರಿಕ ಸಲಕರಣೆಗಳು ಹಲವು ವರ್ಷಗಳಿಂದ ಕೆಟ್ಟು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸದರಿ ಸಂಸ್ಥೆಯಲ್ಲಿ ಖಾಲಿ ಇರುವ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರನ್ನು ತುಂಬಲು ಸರ್ಕಾರವು ಕ್ರಮಕೈಗೊಂಡಿದೆಯೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ತರಬೇತಿ ಅಧಿಕಾರಿ ಹಾಗೂ ಸಹಾಯಕ ತರಬೇತಿ ಅಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡಿದೆ. ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಡಿ.ಎನ್. ಮಾದಪ್ಪ : ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಒಂದೇ ಒಂದು ಐ.ಟಿ.ಐ. ಇದೆ. ಮಡಿಕೇರಿಯಲ್ಲಿರತಕ್ಕ ಈ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿರತಕ್ಕ ತಾಂತ್ರಿಕ ಸಲಕರಣೆಗಳು ಬಹಳ

ವರ್ಷಗಳಿಂದ ಕೆಟ್ಟುಹೋಗಿವೆ ಎಂದು ಉತ್ತರ ಕೊಟ್ಟಿದ್ದೀರಿ. ಬಹಳಷ್ಟು ವರ್ಷಗಳಿಂದ ಉಪಕರಣಗಳು ಕೆಟ್ಟುಹೋಗಿವೆಯಲ್ಲಾ ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ? ಆ ಸಂಸ್ಥೆಯಲ್ಲಿ ಬಹಳಷ್ಟು ತರಬೇತಿ ಅಧಿಕಾರಿಗಳ ಮತ್ತು ಸಹಾಯಕ ತರಬೇತಿ ಅಧಿಕಾರಿಗಳ ಕೊರತೆ ಇದೆ ಎಂದು ಕೇಳಿದ್ದೇನೆ. ಅದನ್ನು ತುಂಬಲಾಗಿದೆ ಎಂದು ಹೇಳಿದ್ದಾರೆ. ಆದರೆ, ಅದನ್ನು ಇವತ್ತಿನವರೆಗೆ ತುಂಬಿಲ್ಲ. ಅದರ ಬಗ್ಗೆ ಸರಿಯಾದ ಮಾಹಿತಿ ಕೊಡಬೇಕು.

ಶ್ರೀ ಸಿದ್ದರಾಮಯ್ಯ : ಇದು ಬಹಳ ಹಳೆಯ ಐ.ಟಿ.ಐ.ಯಲ್ಲಿರತಕ್ಕ ಯಂತ್ರಗಳು ಸವಕಲಾಗಿರುವುದರಿಂದ ಅವುಗಳನ್ನು ಬದಲಾವಣೆ ಮಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದು 1995-96ರಲ್ಲಿ 27.64 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹೊಸ ಯಂತ್ರಗಳನ್ನು ಒದಗಿಸಿದ್ದೇವೆ. ಮುಂದಿನ ವರ್ಷ ಕೂಡ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಕೆಲವು ಹುದ್ದೆಗಳು ಖಾಲಿ ಇರುವುದು ನಿಜ; ಕೆಲವು ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಇನ್ನು ಹತ್ತು ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಪ್ರಿನ್ಸಿಪಾಲ್ ಮತ್ತಿತರ ಬೇರೆ ಹುದ್ದೆಗಳನ್ನು ಲೋಕಸೇವಾ ಆಯೋಗದವರು ಆಯ್ಕೆ ಮಾಡಿದ್ದಾರೆ. ಅದು ವೆರಿಫಿಕೇಷನ್ನಿಗೆ ಹೋಗಿದೆ. ವೆರಿಫಿಕೇಷನ್ ಆಗಿ ಬಂದತಕ್ಷಣ ಹುದ್ದೆಗಳನ್ನು ಭರ್ತಿ ಮಾಡಿ ಆ ಸಂಸ್ಥೆ ಸುಸೂತ್ರವಾಗಿ ನಡೆಯುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಎಸ್. ಮಾದಪ್ಪ : ಮಡಿಕೇರಿಯಲ್ಲಿರತಕ್ಕ ಐ.ಟಿ.ಐ.ಗೆ ಸೇರಿದ ಸುಮಾರ 7 ½ ಎಕರೆ ಜಾಗ ಇದೆ. ಅದನ್ನು ತುಂಬಾ ಜನ ಆಕ್ರಮಣ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಬಂದೂಬಸ್ತ್ ಮಾಡಬೇಕೆಂದು ತಮ್ಮಮೂಲಕ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಮತ್ತು ಅಲ್ಲಿಗೆ ಜವಾಬ್ದಾರಿಯುತವಾದ ಅಧಿಕಾರಿಗಳನ್ನು ಕಳುಹಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾವು ಅಗತ್ಯ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಕೊಡಗು ಜಿಲ್ಲೆಗೆ ಸಂಬಂಧಪಟ್ಟ ವಿರಾಜಪೇಟೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಒಂದು ಕಟ್ಟಡ ಕಟ್ಟಿದ್ದಾರೆ. ಅಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಆ ಕಟ್ಟಡವನ್ನು ಕಟ್ಟಿದ್ದರು. ಎರಡು ವರ್ಷಗಳಲ್ಲಿ ಅದನ್ನು ಪ್ರಾರಂಭ ಮಾಡುವಂಥದ್ದಾಗಲಿ ಅಥವಾ ತರಬೇತಿ ಕೊಡುವುದಕ್ಕೆ ವ್ಯವಸ್ಥೆ ಮಾಡುವಂಥದ್ದಾಗಲಿ ಮಾಡಿಲ್ಲ. ಕಟ್ಟಡ ಪೂರ್ತಿ ಆಗಿದೆ. ಕಟ್ಟಡ ಪೂರ್ತಿ ಮಾಡಿ ಅದಕ್ಕೆ ಹಣ ವೆಚ್ಚ ಮಾಡಿ ಏನು ಮಾಡಿದ್ದಾರೆಂದರೆ ಬೀಗ ಹಾಕಿ ಕುಳಿತಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ನೀವು ಕೇಳುವ ಪ್ರಶ್ನೆ ಬೇರೆ, ಅವರು ಕೇಳಿದ ಪ್ರಶ್ನೆ ಬೇರೆ. ಆಂದಾಗ ಅವರು ಹೇಗೆ ಉತ್ತರ ಕೊಡಬೇಕು? ಮತ್ತೊಂದು ಸಂದರ್ಭದಲ್ಲಿ ಕೇಳಿ.

ಶ್ರೀ ಹೆಚ್. ಡಿ. ಬಸವರಾಜು : ನಾನು ಅದನ್ನೇ ಕೇಳುತ್ತಿರುವುದು. ವಿರಾಜಪೇಟೆ ತಾಲ್ಲೂಕಿನ ಮೊನ್ನೆಂಪೇಟೆಯಲ್ಲಿ ಎರಡು ವರ್ಷಗಳ ಹಿಂದೆ ಒಂದು ಕಟ್ಟಡವನ್ನು ಕಟ್ಟಿದ್ದಾರೆ; ಅದರ ಬಗ್ಗೆ ನಾನು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ವಿರಾಜಪೇಟೆಯಲ್ಲಿ ಐಟಿಐ ಬಿಲ್ಡಿಂಗ್ ಕಟ್ಟಿದ್ದಾರೆ, ಅದರ ಕೆಲಸ ಪ್ರಾರಂಭ ಮಾಡಿಲ್ಲವೆಂದು ಹೇಳುತ್ತಾರೆ. ಅದರ ಬಗ್ಗೆ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಶ್ರೀ ಕುಮಾರ್ ಬಂಗಾರಪ್ಪನವರ ಪ್ರಶ್ನೆ : 1844 ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

ಬೆಂಗಳೂರು ಜಿಲ್ಲಾ ಮತ್ತು ಗ್ರಾಮಾಂತರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಒಕ್ಕೂಟದ ಲೆಕ್ಕ ಪರಿಶೋಧನೆ

194 - ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲಾ ಮತ್ತು ಗ್ರಾಮಾಂತರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಲ್ಲಿ ಎಷ್ಟು ವರ್ಷಗಳಿಂದ ಡೈರಿಯ ಲೆಕ್ಕ ಪರಿಶೋಧನೆ ನಡೆದಿರುವುದಿಲ್ಲ?

ಆ) ಅದಕ್ಕೆ ಕಾರಣಗಳೇನು?

ಇ) ಎಷ್ಟು ವರ್ಷದಿಂದ ಶೇರುದಾರರಿಗೆ ಡಿವಿಡೆಂಟ್ ನೀಡಿರುವುದಿಲ್ಲ?

ಈ) ಅದಕ್ಕೆ ಕಾರಣಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1993-94ನೇ ಸಾಲಿನವರಿಗೆ ಲೆಕ್ಕ ಪರಿಶೋಧನೆಯು ಮುಗಿದಿದ್ದು, 1994-95ನೇ ಸಾಲಿನ ಲೆಕ್ಕ ಪರಿಶೋಧನೆಯು ಪ್ರಗತಿಯಲ್ಲಿದೆ.

ಆ) ಒಕ್ಕೂಟದ ಲೆಕ್ಕ ಪರಿಶೋಧನೆಯು ನಿಯಮಾವಳಿ ಪ್ರಕಾರ ಸಹಕಾರಿ ಇಲಾಖೆ ಲೆಕ್ಕ ಪರಿಶೋಧಕರಿಂದ ಆಗಬೇಕಾಗಿರುತ್ತದೆ. ಒಕ್ಕೂಟದ ಲೆಕ್ಕ ಪತ್ರಗಳು ಪರಿಶೋಧನೆಗಾಗಿ ಸಿದ್ದವಿದ್ದು ಇಲಾಖಾ ಲೆಕ್ಕಪರಿಶೋಧಕರಿಗಾಗಿ ಕಾಯಲಾಗುತ್ತಿದೆ.

ಇ) ಬಮುಲ್ ಲಾಭಗಳಿಸಿದ ವರ್ಷವಾದ 1988-89ನೇ ಸಾಲಿಗೆ ಸಂಬಂಧಿಸಿದಂತೆ ಷೇರುದಾರರಿಗೆ ಡಿವಿಡೆಂಡ್ ನೀಡಲಾಗಿದೆ.1992-93 ಹಾಗೂ 1993-94ನೇ ಸಾಲಿಗೆ ಸಂಬಂಧಿಸಿದಂತೆ ಸರ್ವ ಸದಸ್ಯರ ಮಹಾ ಸಭೆ ಒಪ್ಪಿಗೆ ನಂತರ ಡಿವಿಡೆಂಟ್ ನೀಡಲಾಗುವುದು.

ಈ) 30-6-1993ರ ನಂತರ ಒಕ್ಕೂಟದ ಸರ್ವಸದಸ್ಯರ ಸಭೆ ಜರುಗದೇ ಇರುವ ಕಾರಣ